

ಬಿಡುಗಡೆಯ ದಾರಿ ಎಂದು ಅನಿಸುತ್ತಿಲ್ಲ' ಎನ್ನುವ ಹ್ವಾಯ್‌ನ ಮಾತು ಅವಳ ಅಂತರಂಗದ ಪಿಸುದನಿಯೂ ಹೌದು. ಅದನ್ನು ಮುಚ್ಚಿಡಲೆಂದೇ ಅವಳು ಅವನ ಮೇಲೆ ಸಿಡುಕುತ್ತಾಳೆ.

ಇದು ಲ್ಯಾನ್ ಒಬ್ಬಳ ಮನಃಸ್ಥಿತಿ ಅಲ್ಲ, ಅದು ವಿಯೆಟ್ನಾಮ್‌ನ ಶೈಗಾನ್ ನಗರದ ಆತ್ಮಕಥೆಯೂ ಹೌದು. ಅದನ್ನು ಕಟ್ಟಿದ ರೀತಿಯಲ್ಲಿಯೇ ಜಗತ್ತಿನ ಎಲ್ಲ ನಗರಗಳ ಆತ್ಮಕಥೆಯೂ ಆಗುವಂಥ ಸಾರ್ವತ್ರಿಕ ಗುಣವೊಂದು ದಕ್ಕಿದೆ. ಆದ್ದರಿಂದಲೇ ಎಲ್ಲೋ ದೂರದ ನಗರದ ಕಥನ ನಮ್ಮ ದೇಶ– ಕಾಲದ ಕಥನಕ್ಕೂ ಕನ್ನಡಿ ಹಿಡಿಯುವಂತಿದೆ.

'ಥ್ರೀ ಸೀಸನ್' ಸಿನಿಮಾವನ್ನು ಕಥನದ ದೃಷ್ಟಿಯಿಂದ ಮೂರು ಎಳೆಗಳನ್ನು ಗುರ್ತಿಸಬಹುದು. ಒಂದು ವೇಶ್ಯೆ ಮತ್ತು ಬಾಡಿಗೆ ಸೈಕಲ್ ಡ್ರೈವರ್‌ನ ಸಂಬಂಧದ ಕಥೆ, ಎಳೆವಯಸ್ಸಿನಲ್ಲಿಯೇ ಮಗಳನ್ನು ತೊರೆದುಹೋದ ಅಪ್ಪನ ಹುಡುಕಾಟ, ಹೂ ಮಾರುವ ಹುಡುಗಿ ಮತ್ತು ಕುಷ್ಠರೋಗಪೀಡಿತನಾಗಿ ದಶಕಗಳಿಂದ ಮನೆಯೊಳಗೇ ಅಜ್ಞಾತವಾಸ ಮಾಡುತ್ತಿರುವ ಜನಪದ ಗಾಯಕನ ಕಥೆ.

ಇವನ್ನು ಬಿಟ್ಟು ಇನ್ನೂ ಒಂದು ಮುಖ್ಯ ಪಾತ್ರವಿದೆ. ಅದು ವುಡ್ಡಿ. ವುಡ್ಡಿ ಏಳೆಂಟು ವರ್ಷದ ಬಾಲಕ. ಸೂಟ್‌ಕೇಸ್‌ನಲ್ಲಿ ಸಿಗರೇಟ್, ಚ್ಯೂಯಿಂಗ್‌ಗಮ್, ಲೈಟರ್‌ನಂಥ ವಸ್ತುಗಳನ್ನು ಇರಿಸಿಕೊಂಡು ರಸ್ತೆಯಲ್ಲಿ ಅಡ್ಡಾಡುತ್ತಾ ಮಾರಾಟ ಮಾಡುತ್ತಾನೆ. ಮೇಲೆ ಉಲ್ಲೇಖಿಸಿದ ಎಳೆಗಳ ಮೂಲಕ ಹೆಣೆಯಹೊರಟಿರುವ ಮಹಾನಗರದ ಕಥೆಯ ಆತ್ಮವಾಗಿ ಈ ಹುಡುಗ ಕಾಣುತ್ತಾನೆ. ಸ್ವತಃ ಕಳೆದುಹೋಗಿ ನಿರ್ಗತಿಕನಾದಂತಿರುವ ಈ ಹುಡುಗನೇ ಕೊನೆಯಲ್ಲಿ ಆಶಾದಾಯಕ ನಾಳೆಯ ಸೂಚನೆಯಾಗಿಯೂ ಕಾಣುತ್ತಾನೆ.

ಒಂದೇ ಕಥೆಯನ್ನು ಬೇರೆ ಬೇರೆ ಬಗೆಗಳಲ್ಲಿ ಹೇಳುತ್ತಿರುವಂತೆಯೂ, ಒಂದು ಇನ್ನೊಂದನ್ನು ವಿಸ್ತರಿಸುತ್ತ ಇನ್ನಷ್ಟು ಗಾಢಗೊಳಿಸುತ್ತ ಹೋಗುವ ಹಾಗೆಯೂ ಕಟ್ಟಿರುವ ಈ ಸಿನಿಮಾದ ನಿರೂಪಣೆಯಲ್ಲಿಯೇ ಇರುವ ಕಾವ್ಯಾತ್ಮಕ ಗುಣವು ಪಾತ್ರಗಳನ್ನು ಸಶಕ್ತ ಪ್ರತಿಮೆಗಳನ್ನಾಗಿಸುತ್ತದೆ.

ಮಾಮೂಲಿ ದಾರಿಬದಿ ವ್ಯಾಪಾರಿ ಬಾಲಕ, ತನ್ನ ಸೂಟ್‌ಕೇಸ್ ಕಳೆದುಕೊಂಡು ಅಲೆದಾಡುವಾಗ, ಅವನು ಹುಡುಕುತ್ತಿರುವುದು ಮಹಾನಗರದ ಆತ್ಮವನ್ನೂ ಹೌದು ಎನಿಸಿಬಿಡುತ್ತದೆ. ನಿಜದ ಹೂವಂಥದೇ ಸುವಾಸನೆ ಹೊಂದಿರುವ, ಎಂದಿಗೂ ಬಾಡದ ಕೃತಕ